**<u>ಸಾಕ್ಷಿಯನ್ನು ದಿಃ 16.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-</u>**

ನಾನಾನು ಪಿ.ಯು.ಸಿ ವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. ನಮ್ಮ ತಂದೆ ತೋಟಪ್ಪಶೆಟ್ಟಿ ರವರಿಗೆ 4 ಜನ ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ನನ್ನ ಅಣ್ಣ ಕೆ.ಟಿ ತೊಂಟಧಾರ್ಯ ಎಂಬುವವ ಹಿರಿಯ ಮಗ ಎಂದರೆ ಸರಿ. ಅವರು ತೀರಿಕೊಂಡಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿ ರವರ ವಾರಸುದಾರರು ಎಂದರೆ ಸರಿ. 5 ರಿಂದ 7 ನೇ ಪ್ರತಿವಾದಿಗಳು ತಂಗಿ ರಾಜೇಶ್ವರಿ ರವರ ಮಕ್ಕಳು. ನಮ್ಮ ತಾಯಿ ಸುರ್ವಣಮ್ಮ. ದಿಃ 28.05.2023 ರಂದು ತೀರಿಕೊಂಡರು ಎಂದರೆ ಸರಿ.

ಐಟಂ ನಂ. 1 ರಿಂದ 5 ರ ಸ್ವತ್ತುಗಳು ನಮ್ಮ ತಾಯಿಯ ಖರೀದಿ ಮಾಡಿದ ಸ್ವಯಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ದಾವಾ ಐಟಂ ನಂ. 1 ಮತ್ತು 4 ಒಂದೇ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 48/13 ರ ನಮ್ಮ ತಾಯಿಯ ಜಮೀನು. ಸರ್ವೆ ನಂ. 48/1 ಮತ್ತು 48 ಒಂದೇ ಜಮೀನು ಎಂಬ ವಿಚಾರವನ್ನು ನಿಮ್ಮ ತಕರಾರಿನಲ್ಲಿ ಬರೆಸಿ ಹಾಕಿದ್ದಿರಾ ಎಂದರೆ ಸಾಕ್ಷಿ ಬರೆಸಿ ಹಾಕಿಲ್ಲ, ಸದರಿ ವಿಷಯ ಈಗ ಹೇಳಿದಾಗಲೆ ಗೊತ್ತಾಗಿದ್ದು ಎನ್ನುತ್ತಾರೆ. ವಾದಿ ಕೇಸು ಹಾಕಿದ ನಂತರ ದಾವಾ ಪತ್ರ ನನಗೆ ಬಂದಿಲ್ಲ. ಆದರೆ ಕೇವಲ ವಕೀಲರ ಮೂಲಕ ಕಳುಹಿಸಿದ ನೊಟೀಸು ಬಂದಿತ್ತು ಎನ್ನುತ್ತಾರೆ. ಸಾಕ್ಷಿ ಪುನಃ ದಾವಾ ಪತ್ರ ಬಂದಿತ್ತು ಎನ್ನುತ್ತಾರೆ. ದಾವಾ ಐಟಂ ನಂ. 5 ರ ಮನೆಯಲ್ಲಿ ನನ್ನ ತಾಯಿ ಜೊತೆ ವಾಸ ಇರುವುದು ಎಂದರೆ ಸರಿ. ತಾಯಿ ಇರುವವರೆಗೂ ಅದೆ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ. ತಾಯಿ ಖರೀದಿಸಿದ ದಾವಾ ಸ್ವತ್ತುಗಳ ಮೂಲ ಪತ್ರಗಳು ಅವರ ಹತ್ತಿರವೆ ಇದ್ದವು ಎಂದರೆ ಸರಿಯಲ್ಲ. ಯಾರ ಬಳಿ ಇದ್ದವು ಎಂದು ನನಗೆ ಗೊತ್ತಿಲ್ಲ.

ತಾಯಿ ತೀರಿಕೊಳ್ಳುವ ಮೊದಲೆ ನನ್ನ ಅಣ್ಣ ತೋಂಟಧಾರ್ಯ, ತಂಗಿ ಸಿದ್ದರಾಜೇಶ್ವರಿ ಇಬ್ಬರೂ ತೀರಿಕೊಂಡಿದ್ದರು. ನಮ್ಮ ತಾಯಿ ಆಸ್ತಿಗಳಿಗೆ ವಾದಿ ರಾಜೇಶ್ವರಿ, ಪ್ರತಿವಾದಿಗಳಲ್ಲದೆ ಬೇರೆ ಯಾರೂ ವಾರಸುದಾರರು ಇಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿ ಮತ್ತು ಮಗಳೂ ಕೂಡ ವಾರಸುದಾರರು ಆಗುತ್ತಾರೆ ಎನ್ನುತ್ತಾರೆ. ನನ್ನ ತಕರಾರಿನಲ್ಲಿ ಹೆಂಡತಿ ಮಕ್ಕಳನ್ನು ಪಾರ್ಟಿಯನ್ನಾಗಿ ಮಾಡಬೇಕಾಗಿತ್ತು, ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಬರೆಸಿ ಹಾಕಿಲ್ಲ. ತಾಯಿಯವರು ದಿಃ 28.05.2023 ರಂದು ತೀರಿಕೊಂಡ ನಂತರ ಅವರ ಎಲ್ಲಾ ಆಸ್ತಿಗಳಿಗೆ ವಾದಿ ಮತ್ತು ಪ್ರತಿವಾಗಳೆಲ್ಲರೂ ವಾರಸುದಾರರು ಆಗಿರುತ್ತೇವೆ ಎಂದರೆ ಸರಿ.

ತಾಯಿ ಇರುವವರೆಗೂ ತಾಯಿ ಮತ್ತು ನಾನು ದಾವಾ ಸ್ವತ್ತುಗಳನ್ನು ನೋಡಿಕೊಳ್ಳುತ್ತಿದ್ದೇವು ಎಂದರೆ ಸಾಕ್ಷಿ 1986 ರಿಂದ ನಾನೆ ನೋಡಿಕೊಳ್ಳುತ್ತಿದ್ದೇನೆ ಎನ್ನುತ್ತಾರೆ. 1986 ರಿಂದ ಇಲ್ಲಿಯವರೆಗೂ ನಾನೆ ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳಿದ್ದು, ದಾವಾ ಜಮೀನುಗಳಲ್ಲಿ ಬಂದ ಆದಾಯವನ್ನು ಲೆಕ್ಕ ಪತ್ರ ಇಟ್ಟಿರುತ್ತೇನೆ. ಸಾಕ್ಷಿ ಮುಂದುವರೆ ರೀ–ಇನ್ವೆಸ್ಟ್ ಮಾಡಿ ಜಮೀನು ಅಭಿವೃದ್ದಿ ಪಡಿಸಿರುತ್ತೇನೆ ಎನ್ನುತ್ತಾರೆ. ಹಾಗೆ 1986 ರಿಂದ 2024 ರ ವರೆಗೆ ಲೆಕ್ಕ ಪತ್ರ ಇಟ್ಟ ಬಗ್ಗೆ ದಾಖಲೆಗಳನ್ನು ನ್ಯಾಯಾಲಕ್ಕೆ ಹಾಜರು ಪಡಿಸಿಲ್ಲ. 5 ರಿಂದ 7 ನೇ ಪ್ರತಿವಾದಿಗಳು ಈ ದಾವೆಯಲ್ಲಿ ಪ್ರತ್ಯೇಕ ಲಿಖಿತ ತಕರಾರು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ನೊಟೀಸು ಬಂದಿಲ್ಲ. ಆ ಬಗ್ಗೆ ನಮ್ಮ ವಕೀಲರಲ್ಲಿ ಕೇಳಿ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ.

ದಾವಾ ಸ್ವತ್ತುಗಳು ವಿಭಾಗಕ್ಕೆ ಅರ್ಹಇಲ್ಲ ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ಗೊತ್ತಿಲ್ಲ ಎನ್ನುತ್ತಾರೆ. ತಕರಾರಿನಲ್ಲಿ ವಾದಿ ಪಾಲು ಕೇಳುತ್ತಿರುವುದು ಅವರ ಗಂಡನ ದುರಾಸೆಯಿಂದ ಎಂದು ಬರೆಸಿ ಹಾಕಿರುತ್ತೇನೆ. ನಿಮ್ಮ ಪ್ರಕಾರ ಆಸ್ತಿಯಲ್ಲಿ ಪಾಲು ಕೇಳಿದರೆ ದುರಾಸೆನಾ? ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಕಸ್ಮಾತ್ ಇಡೀ ಆಸ್ತಿ ನಿಮ್ಮದೆ ಆಸ್ತಿ ಎಂದು ಬರೆಸಿ ಹಾಕಿಸಿದ್ದಿರೆ ಅದು ದುರಾಸೆನಾ? ಎಂದರೆ ಸಾಕ್ಷಿ

ಆ ರೀತಿ ಬರೆಸಿ ಹಾಕಿಲ್ಲ ಎನ್ನುತ್ತಾರೆ. ವಾದಿ , 1 ರಿಂದ 3 ಮತ್ತು 5 ರಿಂದ 7 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಲು ತಕರಾರು ಇದೆಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಾನು ಒಬ್ಬನೆ ಜಮೀನುಗಳನ್ನು ಅಭಿವೃದ್ದಿ ಪಡಿಸಿದ್ದು ಅದರಿಂದ ಇದುವರೆಗೂ ಯಾವುದೆ ಉತ್ಪತ್ತಿ ಪಡೆದಿಲ್ಲ, ಈಗ ಉತ್ಪತ್ತಿ ಬರುತ್ತಿದ್ದು, ಪಾಲು ಕೊಡುವುದಿಲ್ಲ ಎನ್ನುತ್ತಾರೆ. ಅದಲ್ಲದೆ ಎಲ್ಲರ ಮದುವೆಯನ್ನು ನಾನೆ ಮಾಡಿದ್ದೇನೆ, ತಾಯಿಯ ಆಸ್ಪತ್ರೆಯ ಖರ್ಚನ್ನು ನಾನೆ ಕಟ್ಟಿದ್ದೇನೆ ಆದ್ದರಿಂದ ತಕರಾರು ಇದೆ ಎನ್ನುತ್ತಾರೆ.

ರೀ ಇನ್ವೆಸ್ಟ್ ಮೆಂಟ್ ಎಂದರೆ ಆ ಜಮಿನಿನಿಂದ ಬಂದ ಆದಾಯವನ್ನು ಪುನಃ ಜಮೀನಿನ ಅಭಿವೃದ್ದಿಗೆ ಖರ್ಚು ಮಾಡಿರುವುದು ಎನ್ನುತ್ತಾರೆ. ನಾನು ನನ್ನ ಸ್ವಂತ ಆದಾಯದಲ್ಲಿ ಜಮೀನಿನ ಅಭಿವೃದ್ದಿಗೆ ಬಳಸಿಲ್ಲ ಎಂದರೆ ನಾನು ಕೆಲವೊಂದು ಸಾರಿ ನನ್ನ ಸ್ವಂತ ಆದಾಯವನ್ನು ಜಮೀನಿನ ಅಭಿವೃದ್ದಿಗೆ ಉಪಯೋಗಿಸಿರುತ್ತೇನೆ ಎನ್ನುತ್ತಾರೆ. ಜಮೀನು ಅಭಿವೃದ್ದಿ ಪಡಿಸಲು ನನ್ನ ಸ್ವಂತ ಆದಾಯವನ್ನು ಉಪಯೋಗ ಪಡಿಸಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. 1982 ರಿಂದ ದಾವೆ ಸಲ್ಲಿಸುವ ವರೆಗೆ ಸುಮಾರು 60 ಲಕ್ಷ ರೂ. ಖರ್ಚು ಮಾಡಿದ ಬಗ್ಗೆ ದಾಖಲೆ ಇಲ್ಲ. ಪ್ರತಿವಾದ ಪತ್ರದ 5 ನೇ ಪ್ಯಾರಾದಲ್ಲಿ ಬರೆಸಿರುವ 5 ನೇ ಪ್ರತಿವಾದಿಯ ಮದುವೆಗೆ 5 ಲಕ್ಷ ರೂ. ಖರ್ಚು ಮಾಡಿರುತ್ತೇನೆ ಎಂದು ಬರೆಸಿರುವುದು ತಪ್ಪಾಗಿರುತ್ತದೆ, ಆದರೆ ಅದು 6 ಮತ್ತು 7 ನೇ ಪ್ರತಿವಾದಿಗಳ ಮದುವೆ ಖರ್ಚು ಮಾಡಿದ್ದೇನೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ.

7 ನೇ ಪ್ರತಿವಾದಿ ಅಂಗಡಿ ನಡೆಸಲು 1-1/2 ಲಕ್ಷ ರೂ. ಹಣ ಕೊಟ್ಟ ಬಗ್ಗೆ ಹಾಗೂ 7 ನೇ ಪ್ರತಿವಾದಿಯ ಮದುವೆಗೆ 5 ಲಕ್ಷ ರೂ. ಖರ್ಚು ಮಾಡಿದ ಬಗ್ಗೆ ದಾಖಲೆ ಇಲ್ಲ. ನನ್ನ ತಾಯಿಗೆ ಅಪೋಲೊ ಆಸ್ಪತ್ರೆಯಲ್ಲಿ , ನನ್ನ ತಂಗಿ ಮತ್ತು ಅವರ ಮಗಳಿಗೆ ಬಿ.ಎಂ. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಮ್ಮ ಕುಟುಂಬದಲ್ಲಿ ನಾನೊಬ್ಬನೆ ಹೆಚ್ಚು ದುರಾಸೆಯ ಮನುಷ್ಯ ಎಂದರೆ ಸರಿಯಲ್ಲ. ಇಡೀ ಆಸ್ತಿಯನ್ನು ಒಳಹಾಕಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ತಂಗಿ, ಅವರ ಮಕ್ಕಳು, ಮತ್ತು ಅಣ್ಣನ ಮಕ್ಕಳಿಗೆ ಮೋಸ ಮಾಡಿ ಆಸ್ತಿಗಳನ್ನು ಲಪಟಾಯಿಸುವ

ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ತಾಯಿಯ ಕುಟುಂಬದ ಅಸ್ತಿಗಳಿಂದ ಬಂದ ಆದಾಯವನ್ನು ಲೂಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ 8 ನೇ ಪ್ಯಾರಾದಲ್ಲಿ ದಾವಾ ಆಸ್ತಿಗಳನ್ನು ವ್ಯವಸಾಯೇತರ ಭೂಮಿಯನ್ನಾಗಿ ಮಾಡಲು ಸಾಕಷ್ಟು ಖರ್ಚು ಮಾಡಿದ್ದೇನೆ ಎಂದು ಹೇಳಿದ್ದು, ಆ ಬಗ್ಗೆ ದಾಖಲೆಗಳು ಇಲ್ಲ.

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಆರ್.ಟಿ.ಸಿ ಆಗಿದ್ದು, ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ.10** ಎಂದು ಗುರುತಿಸಲಾಯಿತು. ಇನ್ನೊಂದು ಆರ್.ಟಿ.ಸಿ ಸರ್ವೆ ನಂ. 48 ಅದು ತಾಯಿ ಹೆಸರಿನಲ್ಲಿ ಇದೆ ಎಂದು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ. 11** ಎಂದು ಗುರುತಿಸಲಾಯಿತು. ತಾಯಿ ಸುರ್ವಣಮ್ಮ ರವರ ಹೆಸರಿನಲ್ಲಿ ಇರುವ ಇನ್ನೊಂದು ಆರ್.ಟಿ.ಸಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ. 12** ಎಂದು ಗುರುತಿಸಲಾಯಿತು. 2017–18 ನೇ ಸಾಲಿನ ಸರ್ವೆ ನಂ. 48 ರಲ್ಲಿ 2 ಎಕರೆ, 27 ಗುಂಟೆ ಜಮೀನು ತಮ್ಮ ತಾಯಿ ಹೆಸರಿನಲ್ಲಿ ಇರುವ ಇರುವ ಇನ್ನೊಂದು ಆರ್.ಟಿ.ಸಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ. 13** ಎಂದು ಗುರುತಿಸಲಾಯಿತು. ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೂ ವಿಭಾಗ ಆಗಿದೆ ಎಂದು ತೋರಿಸಲು ದಾಖಲೆ ಇಲ್ಲ.

ನಾನು ನನ್ನ ಪರವಾಗಿ ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ. 1 ನನ್ನ ತಾಯಿ ವಾದಿ ರಾಜೇಶ್ವರಿ ಹೆಸರಿಗೆ ದಿಃ 07.06.2017 ರಂದು ಹಕ್ಕು ಖುಲಾಸೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಪುನಃ 7 ಜನ ಪ್ರತಿವಾದಿಯರಿಗೂ ಗೊತ್ತಿಲ್ಲದ ಹಾಗೆ ಅದು ಮಾಡಿರುವುದು ಎನ್ನುತ್ತಾರೆ. ಸದರಿ ಪತ್ರವನ್ನು ಎಲ್ಲಿಂದ ತಂದು ಹಾಜರು ಪಡಿಸಿದ್ದಿರಿ ಎಂದರೆ ಸಾಕ್ಷಿ ಓ.ಎಸ್ 1/2023 ರ ದಾವೆಯಲ್ಲಿನ ನೊಟೀಸು ಬಂದಾಗ ಸದರಿ ದಾಖಲೆ ಬಂದಿದ್ದು, ಅದನ್ನು ಈ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ನನಗೆ ಸುಳ್ಳು ಹೇಳುವ ಅಭ್ಯಾಸ ಇರುವುದಿಲ್ಲ. ಸದರಿ ದಾಖಲೆ ಕೊಾಟ್ಟ ನೊಟೀಸು ಜೊತೆ ಬಂದಿದ್ದಲ್ಲ, ಸಬ್ರಿಜಿಸ್ಟ್ರಾರ್ ಆಫೀಸ್ ನಲ್ಲಿ ಹಣ ಕೊಟ್ಟು ತೆಗೆದುಕೊಂಡಂತಹ

ದಾಖಲೆ ಎಂದರೆ ಸಾಕ್ಷಿ ತಹಶೀಲ್ದಾರರ ಕಛೇರಿಯಲ್ಲಿಯೆ ತೆಗೆದುಕೊಂಡು ಬಂದಿದ್ದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಾನು ಪೂರ್ತಿ ಓದಿರುತ್ತೇನೆ. ಅದರಲ್ಲಿ ಇರುವುದನ್ನು ತಿಳಿದುಕೊಂಡಿದ್ದೇನೆ. ಸದರಿ ದಾಖಲೆಯಲ್ಲಿ ಸುರ್ವಣಮ್ಮ ರವರು ಪತ್ರದಲ್ಲಿ ಇರುವ ಷಡ್ಯೂಲ್ ಸ್ವತ್ತು ತಮ್ಮ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕು ಭಾಧ್ಯತೆಗೆ ಒಳಪಟ್ಟ ಜಮೀನು ಎಂದು ಬರೆಸಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ದಿಃ 09.05.1963 ರಂದು ಸುರ್ವಣಮ್ಮ ರವರ ಕ್ರಯಕ್ಕೆ ಬಂದಂತಹ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ.

ನಿಡಿ. 1 ರಲ್ಲಿ ನನ್ನ ಉಳಿಕೆ ಆಸ್ತಿಗಳಲ್ಲಿ ರಾಜೇಶ್ವರಿ ರವರಿಗೆ ಯಾವುದೆ ಹಕ್ಕು ಇಲ್ಲ ಎಂದು ಬರೆದಿಲ್ಲ. ಸದರಿ ಪತ್ರದಲ್ಲಿ ರಾಜೇಶ್ವರಿ ರವರಿಗೆ ಹಿಸ್ಸೆಗೆ ಕೊಟ್ಟಿದ್ದು ಎಂದು ಬರೆದಿಲ್ಲ.ನಿಡಿ.5 ರ ಪಹಣಿ 2010-2011 ನೆ ಸಾಲಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಡಿ. 7 ರ ಪಹಣಿ 2018 ರಿಂದ ರಾಜೇಶ್ವರಿ ರವರ ಹೆಸರಿನಲ್ಲಿ ಇರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.